ವಾರದ ಪತ್ರ

## ಊಟವೇ ಇಲ್ಲದ ಭರ್ಜರಿ ಮದುವೆ

ಇದ್ದುದರಲ್ಲೇ ಸ್ವಲ್ಪ ಉತ್ತಮ ಎಂದು ಹೇಳಬಹುದಾದ ಝೀ ಕನ್ನಡದ 'ಜೊತೆ ಜೊತೆಯಲಿ' ಧಾರಾವಾಹಿ ಮುಗಿಯುವ ಹಾಗೆ ಅನಿಸುತ್ತಿದೆ. ಈಗ ಕೆಲವು ದಿನಗಳಿಂದ ಪ್ರಸಾರ ಆಗುತ್ತಿರುವ ಮದುವೆ ಸಂಭ್ರಮ ನಿಜಕ್ಕೂ ಅದ್ಭುತ. ನಾಯಕಿಯ ತಾಯಿಯೇ ಹೇಳುವಂತೆ 'ಇಂದ್ರನ ವೈಭೋಗ'ವನ್ನೂ ಸಹ ನಾಚಿಸುವ ಮದುವೆ ನಡೆಯುತ್ತಿದೆ.

ವಾರಗಟ್ಟಲೆ ಪ್ರಸಾರ ಆಗುತ್ತಿರುವ ಈ ಸಂಚಿಕೆಗಳಲ್ಲಿ ಬರೀ ಒಡವೆ ವಸ್ತ್ರದ ಭರ್ಜರಿ ಅಲಂಕಾರ ಬಿಟ್ಟರೆ 'ಭರ್ಜರಿ ಮದುವೆ ಊಟ'ದ ದೃಶ್ಯಗಳನ್ನ ನಿರೀಕ್ಷಿಸಿದ್ದ ವೀಕ್ಷಕರಿಗೆ ನಿರಾಸೆ! ಭಾರೀ ಶ್ರೀಮಂತ ಆರ್ಯವರ್ಧನ್ ಗ್ರೂಪ್‌ನ ಮಾಲೀಕರು ಊಟ ತಿಂಡಿಯ ವಿಷಯದಲ್ಲಿ ಜಿಪುಣರಾಗಿ ಬಿಟ್ಟರೆ?

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಚೆಂದದ ಮದುವೆ

ಕಲರ್ಸ್ ಕನ್ನಡದಲ್ಲಿ 'ರಾಜಾ ರಾಣಿ' ಕಾರ್ಯಕ್ರಮದಲ್ಲಿ ಸೆಲೆಬ್ರಿಟಿಗಳ ಮದುವೆ, ಉಡುಗೆ ತೊಡುಗೆಗಳನ್ನು ನೋಡಿ ಸಂತೋಷವಾಯಿತು. ಹಲವು ಪ್ರಾಂತ್ಯದ ಸಂಪ್ರದಾಯದ ಜೋಡಿಯನ್ನು ನೋಡಿದಂತೆ ಆಯಿತು. ದಕ್ಷಿಣ ಕನ್ನಡ, ಉತ್ತರ ಕರ್ನಾಟಕ, ಕೊಡಗು, ಬಂಗಾಳಿ ಶೈಲಿಯ ವೈಶಿಷ್ಟ್ಯ ಗೊತ್ತಾಯಿತು. ಮದುವೆ ಸಂಪ್ರದಾಯಗಳು ನೋಡುವ ಅವಕಾಶ ನಮಗೆ ಸಿಕ್ಕಿತು. ಕೆಲವರು ಆರತಕ್ಷತೆಯ ಉಡುಗೆಯಲ್ಲಿ ಕಾಣಿಸಿಕೊಂಡರು. ಪ್ರತಿ ಜೋಡಿಗಳ ಅಲಂಕಾರ ಹಿನ್ನೆಲೆಯ ಸಂಗೀತ ತುಂಬ ಚೆನ್ನಾಗಿತ್ತು.

ಈ ಜೋಡಿಗಳನ್ನು ನೋಡಿ ನಾವೆಲ್ಲ ಸಂಭ್ರಮಿಸಿದೆವು. ಮದುವೆ ಮನೆಗೆ ಹೋದ ಅನುಭವವಾಯಿತು. ಮದುವೆ ದಿನದ ಸಿಹಿಕನಸು ನಂತರ ಜೀವನದ ಅನುಭವಗಳನ್ನು ಕೇಳಿ ಹಲವರಿಗೆ ಜೀವನದ ಪಾಠ ಆಗಬಹುದು. ಈ ಕಾರ್ಯಕ್ರಮ ನೋಡಿ ಅನೇಕರಿಗೆ ತಮ್ಮ ಮದುವೆಯ ಸಿಹಿ ನೆನಪು ಮರುಕಳಿಸಿರಬಹುದು. ರೂಪ ಪ್ರಭಾಕರ್ ಅವರು ಹೇಳಿದ ಮಾತು ತುಂಬಾ ಮೆಚ್ಚುಗೆ ಆಯಿತು. ಅನುಪಮಾ ಗೌಡ, ತಾರಾ ಅನುರಾಧ ಅವರ ಪ್ರಬುದ್ಧ ಮಾತುಗಳು ಜೀವನಕ್ಕೆ ಹತ್ತಿರವಾಗಿರುತ್ತವೆ. ನಟ ಸೃಜನ್ ಅವರ ಹಾಸ್ಯ ಚಟಾಕಿ ಕಚಗುಳಿ ಇಟ್ಟಂತಾಗುತ್ತದೆ. ಈ ಕಾರ್ಯಕ್ರಮ ನೋಡಿ ಮದುವೆ ಮನೆಗೆ ಹೋದ ಅನುಭವವಾಯಿತು.

—ಎಂ.ಎಸ್. ಉಷಾ ಪ್ರಕಾಶ್

## ಏಕತಾನತೆ ಅನಿಸದಿರಲಿ

ಚಂದನದಲ್ಲಿ ಪ್ರಸಾರವಾಗುತ್ತಿರುವ 'ಮರೆಯದ ಮಾಣಿಕ್ಯ'ದಲ್ಲಿ ಸುಮಾರು ಎರಡು ತಿಂಗಳಿನಿಂದ ಕೇವಲ ರಾಜ್‌ಕುಮಾರ್ ಹಾಡುಗಳಿಗೇ ಸೀಮಿತಗೊಳ್ಳುತ್ತಿರುವುದು ಸರಿಯಲ್ಲ.

ರಾಜ್ ಕುಮಾರ್ ಒಬ್ಬ ಮಹಾನ್ ನಟ, ಮೇರು ನಟ. ಆದರೆ ಅನೇಕ ವಾರಗಟ್ಟಲೆ ಅವರು ಹಾಡಿರುವ ಹಾಡುಗಳಿಗೆ ಮಾತ್ರ ಪ್ರಾಶಸ್ತ್ಯ ನೀಡುತ್ತಿರುವುದು ಸರಿಯಲ್ಲ.

ಕನ್ನಡ ಚಿತ್ರರಂಗದಲ್ಲಿ ಸಾಧನೆ ಮಾಡಿದ ಬೇರೆ ಗಾಯಕರು, ಸಂಗೀತ ನಿರ್ದೇಶಕರು, ಗೀತ ರಚನೆಕಾರರೂ ಇದ್ದಾರೆ ಅವರನ್ನೂ ಪರಿಚಯಿಸಬೇಕು. ಅವರ ಸಾಧನೆ, ಪ್ರತಿಭೆಯನ್ನೂ ಈ ಕಾರ್ಯಕ್ರಮ ಮೂಲಕ ಅನಾವರಣಗೊಳಿಸಬೇಕು. ಇಲ್ಲಿದ್ದರೆ ಏಕತಾನತೆಯಿಂದ ಆಸಕ್ತಿ ಕಳೆದುಕೊಳ್ಳುವಂತೆ ಮಾಡುತ್ತದೆ.

—ಶ್ರೀಧರ್, ಬೆಂಗಳೂರು

## ಮಾಧ್ಯಮ ಸಮಾಜಮುಖಿಯಾಗಲಿ

ಕನ್ನಡ ನ್ಯೂಸ್ ಚಾನಲ್‌ಗಳ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಕೊರೊನಾ ಬಂದಾಗಿನಿಂದ ಇವರೇ ಅದನ್ನು ಓಡಿಸಲು ಪಣತೊಟ್ಟವರಂತೆ ಜನತೆ ಏನೇನು ಮಾಡಬೇಕು ಏನೇನು ಮಾಡಬಾರದು ಎಂದು ವೈದ್ಯರಿಗಿಂತ ಹೆಚ್ಚಾಗಿ ಕಾಳಜಿಯನ್ನು ತೋರಿ, ಎರಡನೇ ಅಲೆ ಮತ್ತು ಮೂರನೆಯ ಅಲೆಗಳ ಬಗ್ಗೆ ತಿಳಿಸಿಕೊಟ್ಟರು.

ಅಫ್ಘಾನಿಸ್ತಾನದಲ್ಲಿ ನಡೆದ ತಾಲಿಬಾನರ ಕ್ರೌರ್ಯಗಳನ್ನು ಕಣ್ಣಾರೆ ಕಂಡವರಂತೆ ನಮಗೆಲ್ಲ ತಿಳಿಸಿದರು. ಮೈಸೂರಿನ ಅತ್ಯಾಚಾರ ಪ್ರಕರಣದ ನಂತರ ಇವರ ಭಾಷೆಯೇ ಬದಲಾಗಿಬಿಟ್ಟಿದೆ. ಸಮಾಜಮುಖಿಯಾಗಿ ಯೋಚಿಸಿದರೆ ಹೇಗಾಗುವುದಿಲ್ಲ ಎಂದೆನಿಸುತ್ತದೆ.

—ಪ್ರಸನ್ನ ಗಣಪತಿ ಎ.ಎಚ್., ಬೆಂಗಳೂರು

## ಇಷ್ಟು ನೀಚ ಬುದ್ಧಿ ಬೇಕಿಲ್ಲ

ಕಲರ್ಸ್‌ನ 'ಗೀತಾ' ಧಾರಾವಾಹಿಯಲ್ಲಿನ ಗೀತಾಳ ತಂದೆಯಂತಹ ಕ್ರೂರಿ, ನೀಚ ಜಗತ್ತಿನಲ್ಲಿ ಇರುವುದು ಸಾಧ್ಯವಿಲ್ಲ. ಇಂತಹ ಪಾತ್ರ ಸಮಾಜಕ್ಕೆ ನೀಡುವ ಸಂದೇಶವಾದರೂ ಏನು? ಮಗಳ ಭವಿಷ್ಯವನ್ನೇ ಹಾಳುಮಾಡಲು ತೀರ್ಮಾನಿಸಿರುವ ತಂದೆಗೆ ಧಿಕ್ಕಾರ.

—ಸಿ.ಆರ್. ಶ್ರೀನಿವಾಸ, ಬೆಂಗಳೂರು

## ಲವಲವಿಕೆಯ ಸಿಹಿಕಹಿ ಸವಿ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ' ಅಡುಗೆ ವಿಭಾಗದಲ್ಲಿ ಸಿಹಿಕಹಿ ಚಂದ್ರು ತಾವೇ ಅಡುಗೆ ಮಾಡುವುದಲ್ಲದೇ ಸಾಮಾನ್ಯ ಜನರಿಗೂ ಮಾಡಲು ಅವಕಾಶ ಕಲ್ಪಿಸಿಕೊಡುತ್ತಿದ್ದಾರೆ. ಹಾಗೆಯೇ ಎಷ್ಟೋ ಕಲಾವಿದರನ್ನು ಕರೆಸಿ ಅವರ ಬಗ್ಗೆಯೂ ತಿಳಿಸಿ ಕೊಡುತ್ತಿದ್ದಾರೆ.

ಊಟದ ಸವಿಯ ಜೊತೆ ಹನಿಗವನ, ತಮಾಷೆಯ ಜೊತೆ ಮಾಹಿತಿ ಪೂರ್ಣ ಸಂಗತಿಗಳನ್ನು ತಿಳಿಸುತ್ತಾರೆ. ಊರಿನಲ್ಲಿರುವ ಬೇರೆ ಬೇರೆ ಹೋಟೆಲ್‌ನಲ್ಲಿ ತಾವು ತಿಂದು ನಮಗೂ ಪರಿಚಯಿಸಿ ಅವರಿಗೂ ಸಹಾಯ



ಮಾಡುತ್ತಾರೆ. ಅದೇ ರೀತಿ ಆರೋಗ್ಯ ಆಹಾರ ವಿಭಾಗದಲ್ಲಿ ಗೌರಿ ಅಮ್ಮನವರ ಸಲಹೆ ತುಂಬಾ ಉಪಯುಕ್ತವಾಗಿದೆ. ಒಟ್ಟಿನಲ್ಲಿ ಸಂಪೂರ್ಣ ಕಾರ್ಯಕ್ರಮ ಲವಲವಿಕೆಯಿಂದ ಕೂಡಿರುತ್ತದೆ.

—ಬಿ.ಆರ್. ಉಷಾ, ಬೆಂಗಳೂರು

## ಡ್ರಗ್ಸ್ ಪ್ರಚಾರವೇ?

ನಮ್ಮ ಕನ್ನಡ ಚಾನೆಲ್‌ಗಳ ಧಾರಾವಾಹಿಗಳ ಬಗ್ಗೆ ಎಷ್ಟು ಬರೆದರೂ ಅವರು ಅರ್ಥ ಮಾಡಿಕೊಳ್ಳಲು ಹೋಗುವುದಿಲ್ಲ. 'ಮಂಗಳಗೌರಿ' ಮದುವೆ ಹೆಸರಿಗೆ ತಕ್ಕಂತೆ ಇಲ್ಲ. 'ಗೀತಾ'ದಲ್ಲಿ ಈಗ ಡ್ರಗ್ಸ್ ಪ್ರಸಂಗ ಬಂದಿದೆ. ಉಳಿದವುಗಳ ಗುಣಗಾನ ಬೇಕಿಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು